## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :— "ಸಿ" ವರ್ಗದ ಸರ್ಕಾರಿ ಹುದ್ದೆಗಳಿಗೆ ಸೇರುವ ಅಭ್ಯರ್ಥಿಗಳಿಗೆ ಕರ್ನಾಟಕ ಸಿವಿಲ್ ಸೇವೆಗಳು (ನೇಮಕಾತಿ)(ಕನ್ನಡ ಭಾಷಾ ಪರೀಕ್ಷೆ) ನಿಯಮಗಳು 1984ರ ಪ್ರಕಾರ ಕನ್ನಡ ಭಾಷಾ ಪರೀಕ್ಷೆಯನ್ನು ನಿಗದಿಪಡಿಸುವ ಬಗ್ಗೆ.

○ ○ ○

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:69:ಸೇನಿಅರೆ:84, ಬೆಂಗಳೂರು, ದಿನಾಂಕ :23–9–1985

ಕರ್ನಾಟಕ ಸಿವಿಲ್ ಸೇವೆಗಳು (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984ರ 2ನೇ ನಿಯಮದ ಪ್ರಕಾರ ದಿನಾಂಕ 8–8–1986ರ ಹಾಗೂ ನಂತರ "ಸಿ" ವರ್ಗದ ಹುದ್ದೆಗಳಿಗೆ ಆಯ್ಕೆಯಾದ ಯಾವುದೇ ಅಭ್ಯರ್ಥಿಯು ಸರ್ಕಾರವು ವಿಶೇಷ ಅಥವಾ ಸಾಮಾನ್ಯ ಆದೇಶದಲ್ಲಿ ನಿಗದಿಪಡಿಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹೊರತು ನೇಮಕ ಹೊಂದಲು ಅರ್ಹನಾಗುವುದಿಲ್ಲ.

2. ಮೇಲೆ ಹೇಳಿರುವ ನಿಯಮಗಳ ಪ್ರಕಾರ ಸರ್ಕಾರವು ಅಭ್ಯರ್ಥಿಯ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಲು ಕೆಳಕಂಡ ಪರೀಕ್ಷೆಯನ್ನು ನಿಗದಿಪಡಿಸಿದೆ :—

ಪರೀಕ್ಷೆಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಸಮಯ :1 ಘಂಟೆ

ಅಂಕಗಳು :90

1). ಮೊದಲನೇ ಹಂತ — ಲಿಖಿತ ಪರೀಕ್ಷೆ

ಲಿಖಿತ ಪರೀಕ್ಷೆಗೆ ಕನ್ನಡ ಶಾಲಾ-ಸಾಮಾನ್ಯ ತರಗತಿಯ ಕನ್ನಡ ಮುಖ್ಯ ಪಠ್ಯಪುಸ್ತಕ ಹಾಗೂ ವಿವಿಧ ಲೇಖಕರು ಬರೆದ ಕರ್ನಾಟಕ ಪಠ್ಯಪುಸ್ತಕ ರಚನಾ ಪರಿಷತ್ತು ಪ್ರಕಟಿಸಿರುವ "ಸತ್ಯಕ್ಕೆ ಬಲ ಕೊಟ್ಟ ಗಳಿಗೆಯು" ಎಂಬ ಪಾಠದಿಂದ ಆರಂಭವಾಗುವ ಸಣ್ಣ ಕಥೆಗಳು — ಇವುಗಳಿಂದ ಪ್ರಶ್ನೆಗಳನ್ನು ಕೊಡಲಾಗುವುದು.

ಅಂಕಗಳು :10

2). ಎರಡನೆಯ ಹಂತ — ಮೌಖಿಕ ಪರೀಕ್ಷೆ

ಮೌಖಿಕ ಪರೀಕ್ಷೆಯನ್ನು ಕೆಳಕಂಡಂತೆ ನಡೆಸಬೇಕು.

(ಅ). ಮುದ್ರಿತ ಹಾಗೂ ಹಸ್ತಪ್ರತಿಗಳನ್ನು ಓದುವುದು.
(ಆ). ಅರ್ಜಿಗಳನ್ನು ಓದಿ ವಿವರಿಸುವುದು.
(ಇ). ಸಂಭಾಷಣೆ ನಡೆಸುವುದು.

ಈ ಕೆಳಗಿನ ಮಟ್ಟದಲ್ಲಿ ಮೂರೂ ವಿಧದಲ್ಲಿ ಕನಿಷ್ಠ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂದು ಪರಿಗಣಿಸತಕ್ಕದ್ದು.

(ಅ). ಲಿಖಿತ ಪರೀಕ್ಷೆಯಲ್ಲಿ ಪಡೆಯತಕ್ಕ ಕನಿಷ್ಠ ಅಂಕಗಳು :30
(ಆ). ಮೌಖಿಕ ಪರೀಕ್ಷೆಯಲ್ಲಿ ಪಡೆಯತಕ್ಕ ಕನಿಷ್ಠ ಅಂಕಗಳು : 3
(ಇ). ಲಿಖಿತ ಪರೀಕ್ಷೆಯಲ್ಲಿ ಮತ್ತು ಮೌಖಿಕ ಪರೀಕ್ಷೆಯಲ್ಲಿ ಒಟ್ಟಿಗೆ ಪಡೆಯತಕ್ಕ ಕನಿಷ್ಠ ಅಂಕಗಳು :35

3. ಲೋಕ ಸೇವಾ ಆಯೋಗ ಹಾಗೂ ಇತರೆ ಆಯ್ಕೆ ಮಾಡುವ ಅಧಿಕಾರ ಹೊಂದಿರುವ ಇತರ ಸಮಿತಿ ಮತ್ತು ಪ್ರಾಧಿಕಾರಿಗಳಿಂದ ಆಯ್ಕೆಪಟ್ಟಿ ಬಂದ ನಂತರ ಆ ಪಟ್ಟಿಗಳಿಂದ ನೇಮಕ ಮಾಡುವ ಮತ್ತು ಮೇಲೆ ಹೇಳಿದ ಪರೀಕ್ಷೆಯನ್ನು ನಡೆಸತಕ್ಕ ಅಧಿಕಾರ ಹೊಂದಿರುವ ಪ್ರಾಧಿಕಾರಿಗಳು, ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ನಡೆಸತಕ್ಕದ್ದು, ದಿನಾಂಕ :7–8–1986ರ ನಂತರ ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪಟ್ಟಿಯನ್ನು ಕಳಿಸುವಾಗ ಈ ಆದೇಶದಲ್ಲಿ ನಿಗದಿಪಡಿಸಿದ ಕನ್ನಡ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಮಾತ್ರ ನೇಮಕಾತಿಗೆ ಅರ್ಹರು ಎಂಬ ಷರತ್ತನ್ನು ಆಯ್ಕೆಪಟ್ಟಿಯಲ್ಲಿ ಲೋಕ ಸೇವಾ ಆಯೋಗ ಹಾಗೂ ಇತರೆ ಆಯ್ಕೆ ಸಮಿತಿ ಪ್ರಾಧಿಕಾರಿಗಳು ಕಾಣಿಸತಕ್ಕದ್ದು.

ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ.

ಸಹಿ,

(ಎಂ. ಎಂ. ನಾರಾಯಣ)
ಸರ್ಕಾರದ ಸಹ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವಾ ನಿಯಮಗಳು)

ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲು ವಾರ್ತಾ ಇಲಾಖೆಯವರಿಗೆ,
1. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳಿಗೆ/ಅಪರ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಉಪಕಾರ್ಯದರ್ಶಿಗಳಿಗೆ. 3. ಇಲಾಖಾ ಮುಖ್ಯಸ್ಥರುಗಳಿಗೆ.
4. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ.